ಮಾಡುವ ಕೆಲಸ ಮಾಡುತ್ತೇವೆ. ಹಿಂದುಳಿದ ಪ್ರದೇಶಗಳನ್ನು ಅಭಿವೃದ್ಧಿಪಡಿಸುವ ಗುರಿ ಇಟ್ಟುಕೊಂಡು ಇಂಥ ಕ್ರಮವನ್ನು ತೆಗೆದುಕೊಂಡಿದ್ದೇವೆ.

ಅಧ್ಯಕ್ಷರು: ಸ್ಪಷ್ಟವಾಗಿ ಹೇಳಿದ್ದಾರೆ. ನೀವು ಪ್ರಶ್ನೋತ್ತರದಲ್ಲಿ ಈ ತರಹ ಮಾಡಿದರೆ ಚರ್ಚೆಗೆ ಅವಕಾಶವಾಗುವುದಿಲ್ಲ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಸಣ್ಣ ಕೈಗಾರಿಕೆಗಳು ಬೆಳವಣಿಗೆಯಾಗದೆ ರಾಜ್ಯದ ಬೆಳವಣಿಗೆ ಅಭಿವೃದ್ಧಿಯಾಗುವುದಿಲ್ಲ. ಸಣ್ಣ ಕೈಗಾರಿಕೆ ಎನ್ನತಕ್ಕಂಥದ್ದನ್ನು ಸಂಪೂರ್ಣವಾಗಿ ವಿಫಲಗೊಳಿಸುತ್ತಿದ್ದಾರೆ. ಅದಕ್ಕೋಸ್ಕರ ಕೆಲವೊಂದು ಮಾನ-ದಂಡಗಳನ್ನಿಟ್ಟುಕೊಂಡು ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಸ್ಪಷ್ಟವಾದಂ-ತಹ ನಿರ್ಧಾರವಾಗಬೇಕಾಗಿದೆ. ಅವರು ಇನ್ನೂ ಯುವಕರಿದ್ದಾರೆ, ಸ್ವಲ್ಪ ಒಳ್ಳೆಯ ಕೆಲಸ ಮಾಡಲಿ ಎಂದು ಹೇಳಿದೆ ಅಷ್ಟೇ.

ಶ್ರೀ ನರಸಿಂಹನಾಯಕ(ರಾಜುಗೌಡ): ಅವರೇನು ಸಲಹೆಗಳನ್ನು ಕೊಡುತ್ತಾರೆ, ಅವುಗಳನ್ನು ಪರಿಗಣಿಸುವುದಕ್ಕೆ ಪ್ರಯತ್ನಿಸುತ್ತೇನೆ.

ಜಲಸಂಪನ್ಮೂಲ ಕಾರ್ಯಯೋಜನೆಗಳು

02(455)

ಪ್ರಶ್ನೆ

ಶ್ರೀ ರಮೇಶ್ ಬಂಡಿಸಿದ್ದೇಗೌಡ ಎ.ಬಿ. (ಶ್ರೀರಂಗಪಟ್ಟಣ)

ಅ) ಶ್ರೀರಂಗಪಟ್ಟಣ ವಿಧನಸಭಾ ಕ್ಷೇತ್ರದಲ್ಲಿ ಪ್ರಸ್ತುತ ಜಲಸಂಪನ್ಮೂಲ ಇಲಾಖೆಯಿಂದ ಕೈಗೊಂಡಿರುವ ಕಾಮಗಾರಿಗಳಾವುವು; ಅವುಗಳಿಗೆ ಪ್ರಸ್ತುತ ಸಾಲಿನಲ್ಲಿ ಒದಗಿಸಲಾಗಿರುವ ಅನುದಾನ ಎಷ್ಟು?

ಆ) ಶ್ರೀರಂಗಪಟ್ಟಣ ತಾಲ್ಲೂಕಿನ 300 ವರ್ಷಗಳ ಹಳೆಯ ಕಾಲುವೆಗಳಾದ ಸಿಡಿಎಸ್ ವಿರಿಜಾ ನಾಲ, ದೇವರಾಯ ನಾಲಾ, ಆರ್,ಬಿ,ಎಲ್,ಎಲ್.ಹಾಗೂ ಎಲ್.ಬಿ.ಎಲ್.ಎಲ್. ನಾಲಾಗಳ ದುರಸ್ಥಿತಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಸಿ.ಡಿ.ಎಸ್.ವಿರಿಜಾ ನಾಲೆ, ದೇವರಾಯ ನಾಲೆ,ಆರ್.ಬಿ.ಎಲ್.ಎಲ್. ಹಾಗೂ ಎಲ್.ಬಿ.ಎಲ್.ಎಲ್.ನಾಲಾಗಳ ಆಧುನೀಕರಣಕ್ಕೆ ಯಾವುದಾದರೂ ಯೋಜನೆ ಸರ್ಕಾರ ಕೈಗೊಂಡಿದೆಯೇ; ಹಾಗಿದ್ದಲ್ಲಿ, ಯಾವ ಯೋಜನೆ ಕೈಗೊಳ್ಳಲಾಗಿದೆ ಹಾಗೂ ಅದಕ್ಕೆ ಒದಗಿಸಲಾಗಿರುವ ಅಂದಾಜು ಅನುದಾನ ಎಷ್ಟು?

ಈ) ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕಿನ ಕರಿಘಟ್ಟ ಏತ ನೀರಾವರಿ ಪ್ರದೇಶವು ಮಳೆಯಾಶ್ರಿತ ಪ್ರದೇಶವಾಗಿದ್ದು, ಸದರಿ ಯೋಜನೆಯು ಹಲವಾರು ವರ್ಷಗಳಿಂದ ಕಾರ್ಯನಿರ್ವಹಿಸದೆ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರಗಳನ್ನು ಒದಗಿಸುವುದು)?

ಉ) ಕಾಲುವೆಗೆ ನೀರು ಬಿಡುವ ಮುನ್ನ ಸದರಿ ಕಾಲುವೆ ಮತ್ತು ಸಿ.ಡಿ. ಕಾಮಗಾರಿಗಳ ದುರಸ್ಥಿತಿಗಾಗಿ ಕರಿಘಟ್ಟ ಏತ ನೀರಾವರಿ ಯೋಜನೆಗಳನ್ನು ಪುನಶ್ಚೇತನಗೊಳಿಸಲು ಬಿಡುಗಡೆ ಮಾಡಿರುವ ಅನುದಾನ ಎಷ್ಟು(ವಿವರಗಳನ್ನು ಒದಗಿಸುವುದು)?

ಊ) ಬನ್ನಹಳ್ಳಿ ಕೆರೆಯಿಂದ ನೇರಲೆಕೆರೆ ಹೊಸಕೆರೆಗೆ ಏತ ನೀರಾವರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರಗಳನ್ನು ನೀಡುವುದು).

ಶ್ರೀ ಬಸವರಾಜ ಬೊಮ್ಮಾಯಿ(ಜಲ ಸಂಪನ್ಮೂಲ ಸಚಿವರು)

ಉತ್ತರ

ಅ) ಶ್ರೀರಂಗಪಟ್ಟಣ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕಾವೇರಿ ನೀರಾವರಿ ನಿಗಮಕ್ಕೆ ಸಂಬಂಧಪಟ್ಟಂತೆ, 2012–13 ನೇ ಸಾಲಿನಲ್ಲಿ ಪಿಕ್ ಅಪ್ ಮತ್ತು ರಸ್ತೆಗಳ ಅಭಿವೃದ್ಧಿ, ಕೆ.ಆರ್.ಎಸ್ ಗೇಟುಗಳ ಪುನಶ್ಚೇತನ ಕಾಮಗಾರಿ, ಅಣೆಕಟ್ಟೆ ಮತ್ತು ಅದರ ನಾಲೆಗಳ ಆಧುನೀಕರಣ, Surveillance in KRS dam, ಲಿಂಕ್ ಕಾಲುವೆಯ ಕಾಮಗಾರಿಗಳು,ಕೆರೆಗಳ ಪುನಶ್ಚೇತನ ಕಾಮಗಾರಿಗಳು ಇತ್ಯಾದಿ ಸೇರಿದಂತೆ, ಒಟ್ಟಾರೆ 185 ಸಂಖ್ಯೆ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಇವುಗಳಿಗೆ ಪ್ರಸ್ತುತ ಸಾಲಿನಲ್ಲಿ ಒಟ್ಟು ರೂ.20.03 ಕೋಟಿ ಅನುದಾನವನ್ನು ಕಾವೇರಿ ನೀರಾವರಿ ನಿಗಮದ ಆಯವ್ಯಯದಲ್ಲಿ ನಿಗದಿಪಡಿಸಲಾಗಿದೆ. ವಿಶ್ವೇಶ್ವರಯ್ಯ ನಾಲಾ ಜಾಲಾದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕಾವೇರಿ ನೀರಾವರಿ ನಿಗಮದ ಮಂಡಳಿಯು ಅನುಮೋದನೆ ನೀಡಿದ್ದು, ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಇದಲ್ಲದೆ, ಕಾಲುವೆಗಳಿಗೆ ಖಾರೀಫ್ ಬೆಳೆಗೆ ನೀರುಬಿಡುವ ಮುನ್ನ, ಕಾಲುವೆ ಮತ್ತು ಅಡ್ಡಮೋರಿಗಳ ದುರಸ್ತಿಗಾಗಿ/ನಿರ್ವಹಣೆಗಾಗಿಯೂ ಸಹಾ ಒಟ್ಟು 30 ಕಾಮಗಾರಿಗಳನ್ನು ಕೈಗೊಂಡಿದ್ದು, ಇವುಗಳಿಗೆ ರೂ.46.30 ಲಕ್ಷಗಳ ಅನುದಾನ ನೀಡಲಾಗಿದೆ.

ಆ) ದೇವರಾಯ ನಾಲೆಯ ಆಧುನೀಕರಣ ಕಾಮಗಾರಿಯ ರೂ.21.00 ಕೋಟಿ ಮೊತ್ತದ ಅಂದಾಜಿಗೆ ಮಂಜೂರಾತಿ ನೀಡಲಾಗಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿದೆ. ವಿರಿಜಾ ನಾಲೆಯ ಆಧುನೀಕರಣ ಕಾಮಗಾರಿಯ ಅಂದಾಜನ್ನು ತಯಾರಿಸಲಾಗಿದೆ. ಸಿ.ಡಿ.ಎಸ್ ನಾಲೆಯ ಆಧುನೀಕರಣದ ಅಂದಾಜು ತಯಾರಿಕಾ ಹಂತದಲ್ಲಿದೆ. ವಿಶ್ವೇಶ್ವರಯ್ಯ ನಾಲಾಜಾಲಾದ ಅಂದಾಜು ಮಂಡಳಿಯಲ್ಲಿ ಅನುಮೋದನೆಯಾಗಿದ್ದು, ಇದರಲ್ಲಿ ಎಲ್.ಬಿ.ಎಲ್.ಎಲ್. ನಾಲೆಯ ಅಭಿವೃದ್ಧಿ ಕಾಮಗಾರಿಯ ರೂ.11.80 ಕೋಟಿ ಮೊತ್ತಕ್ಕೆ ಸೇರಿದೆ. ಅಲ್ಲದೆ, ಆರ್.ಬಿ.ಎಲ್.ಎಲ್.ನ ಅವಶ್ಯಕ ಕಾಮಗಾರಿಗಳನ್ನು ಈ ಸಾಲಿನಲ್ಲಿ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಕೈಗೊಳ್ಳಲು ಕ್ರಮ ತೆಗೆದುಕೊಳ್ಳಲಾಗಿದೆ.

ಇ) ದೇವರಾಯ ನಾಲೆಯ ಆಧುನೀಕರಣ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯಲ್ಲಿದೆ. ವಿರಿಜಾ ನಾಲೆಯ ಆಧುನೀಕರಣ ಕಾಮಗಾರಿಯ ಅಂದಾಜನ್ನು ತಯಾರಿಸಲಾಗಿದೆ. ಸಿ.ಡಿ.ಎಸ್ ನಾಲೆಯ ಆಧುನೀಕರಣದ ಅಂದಾಜು ತಯಾರಿಕಾ ಹಂತದಲ್ಲಿದೆ. ಪ್ರಸಕ್ತ ಸಾಲಿನಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು. ವಿಶ್ವೇಶ್ವರಯ್ಯ ನಾಲಾ ಜಾಲದ ಅಂದಾಜು ಮಂಡಳಿಯಲ್ಲಿ ಅನುಮೋದನೆಯಾಗಿದ್ದು, ಇದರಲ್ಲಿ ಎಲ್.ಬಿ.ಎಲ್.ಎಲ್.ನಾಲೆಯ ಅಭಿವೃದ್ಧಿ ಕಾಮಗಾರಿಯು ಸೇರಿದೆ. ಆರ್.ಬಿ.ಎಲ್.ಎಲ್. ನಾಲೆಯ ಅವಶ್ಯಕ ಕಾಮಗಾರಿಗಳಿಗೆ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಕೈಗೊಳ್ಳಲು ಕ್ರಮ ಕೈಗೊಳ್ಳಲಾಗಿದೆ.

ಇವುಗಳಿಗೆ 2012–13ನೇ ಸಾಲಿನಲ್ಲಿ ನೀಡಿರುವ ಅನುದಾನದ ವಿವರ ಇಂತಿವೆ:

ದೇವರಾಯ ನಾಲ	ರೂ.800.00ಲಕ್ಷಗಳು
ವಿರಿಜಾ ನಾಲಾ	ರೂ.1800.00 ಲಕ್ಷಗಳು
ಸಿ.ಡಿ.ಎಸ್.	ರೂ.1500.00 ಲಕ್ಷಗಳು

ಈ) ಕರಿಘಟ್ಟ ಏತ ನೀರಾವರಿ ಯೋಜನೆಯು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಬರುತ್ತದೆ.

ಉ) ಕರಿಘಟ್ಟ ಏತ ನೀರಾವರಿ ಯೋಜನೆಯು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಬರುತ್ತದೆ.

ಊ) ಬನ್ನಹಳ್ಳಿ ಕೆರೆಯಿಂದ ನೇರಳೆಕೆರೆ ಹೊಸಕೆರೆಗೆ ನೀರನ್ನು ಒದಗಿಸುವ ಕುಡಿಯುವ ನೀರಿನ ಯೋಜನೆಗೆ ರೂ.62.00 ಲಕ್ಷ ಮೊತ್ತದ

ಅಂದಾಜು ಕಾವೇರಿ ನೀರಾವರಿ ನಿಗಮದಲ್ಲಿ ಮಂಜೂರಾಗಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಶ್ರೀ ರಮೇಶ್ ಬಂಡಿಸಿದ್ದೇಗೌಡ ಎ.ಬಿ.:ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರಿಸಿದ್ದಾರೆ. ನಾನು ಕೇಳಿದ ಮೊದಲನೇ ಪ್ರಶ್ನೆಗೆ, ಕೆರೆಗಳ ಪುನಶ್ಚೇತನ ಮತ್ತು ಗೇಟ್‌ಗಳ ಅಭಿವೃದ್ಧಿಗೆ ಮತ್ತು ಇನ್ನಿತರ ಅಭಿವೃದ್ಧಿಗೆ ಎಂದು 20 ಕೋಟಿ ಹಣವನ್ನು ರೂಪಾಯಿಗಳನ್ನು ಕೊಟ್ಟಿದ್ದಾರೆ. ಜೊತೆಗೆ ನಾಲೆಗಳ ಅಭಿವೃದ್ಧಿಗೆ ಖಾರೀಫ್ ಬೆಳೆಗೆ ಮುನ್ನ ಎಂದು ಹೇಳಿ 30 ಕಾಮಗಾರಿಗಳಿಗೆ 46 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. 20 ಕೋಟಿ ರೂಪಾಯಿಗಳು ಕೇವಲ ಗೇಟ್‌ಗೆ ಮಾತ್ರ ಹೋಗುತ್ತದೆ. ನಮ್ಮ ಒಂದೊಂದು CDS ನಾಲೆಯ ಉದ್ದ 100 ಕಿ.ಮೀ.ಗಿಂತ ಹೆಚ್ಚಿದೆ. ವಿರಿಜಾ ನಾಲೆ ಅಣೆಕಟ್ಟು channels ಏನು ಬರುತ್ತದೆ. KRS ಭಾಗಕ್ಕೆ ಬಂದಂಥ ಅಣೆಕಟ್ಟು channels ಪೂರ್ತಿ ನನ್ನ ಕ್ಷೇತ್ರದ ವ್ಯಾಪ್ತಿಗೆ ಬರುತ್ತವೆ. ಅದಕ್ಕೆ ಕೇವಲ 46 ಲಕ್ಷ ರೂಪಾಯಿಗಳನ್ನು ಕೊಟ್ಟರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಇವತ್ತು ನಮ್ಮ ಭಾಗದಲ್ಲಿ, ತಮ್ಮ ಭಾಗದಲ್ಲಿಯೂ ಮಳೆಯಾಗಿಲ್ಲ.

ಅಧ್ಯಕ್ಷರು:ಮೊದಲು ಸಚಿವರು ಉತ್ತರ ಹೇಳಲಿ, ಆನಂತರ ಕೇಳಿ.

ಶ್ರೀ ರಮೇಶ್ ಬಂಡಿಸಿದ್ದೇಗೌಡ ಎ.ಬಿ.: ಕೊನೆಯ ಭಾಗಕ್ಕೆ ನೀರು ತೆಗೆದುಕೊಂಡು ಹೋಗಬೇಕು. ಆಧುನೀಕರಣ ಮಾಡುತ್ತೇವೆ ಎನ್ನುತ್ತಾರೆ. ಆಧುನೀಕರಣ ಮಾಡುವ ಮುಂಚೆ ಕೊನೆಯ ಭಾಗಕ್ಕೆ ನೀರು ತೆಗೆದುಕೊಂಡು ಹೋಗಬೇಕಾದರೆ, ಏನು ಕಾಮಗಾರಿಗಳನ್ನು ಮಾಡಬೇಕು ಅದಕ್ಕೆ ಗಮನ ಕೊಡಬೇಕು ಮತ್ತು ತಕ್ಷಣ ಕಾಮಗಾರಿಗಳನ್ನು ಮಾಡಲಿಕ್ಕೆ ತಮ್ಮ ಮುಖಾಂತರ ಸಚಿವರಿಗೆ ಒತ್ತಾಯ ಮಾಡುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ(ಜಲ ಸಂಪನ್ಮೂಲ ಸಚಿವರು): ಮಾನ್ಯ ಸದಸ್ಯರು ಕೇಳಿರುವಂಥ ಪ್ರಶ್ನೆಗಳಿಗೆ ಈಗಾಗಲೇ ಸವಿಸ್ತಾರವಾದಂಥ ಉತ್ತರಗಳನ್ನು ಕೊಟ್ಟಿದ್ದೇನೆ. ಈ ನಿರ್ವಹಣೆಯ ಕಾಮಗಾರಿಗಳಲ್ಲಿ 30 ಕಾಮಗಾರಿಗಳನ್ನು ತೆಗೆದುಕೊಂಡಿದ್ದು, ಅದಕ್ಕೆ ಈಗಾಗಲೇ ನಾವು 46 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅದರ ಅವಶ್ಯಕತೆಗನುಗುಣವಾಗಿಯೇ ಕೊಟ್ಟಿದ್ದೇವೆ. ಬೇರೆ ಬೇರೆ ಆಧುನೀಕರಣಕ್ಕೆ ಒಟ್ಟಾರೆ ಮಂಡ್ಯ circle ಗೆ 302 ಕೋಟಿ ರೂಪಾಯಿಗಳನ್ನು ವಿನಿಯೋಗಿಸಿದ್ದೇವೆ. ಈಗಾಗಲೇ ಉತ್ತರದಲ್ಲಿ ಹೇಳಿದ್ದೇನೆ. ದೇವರಾಯ ನಾಲೆಗೆ ಈ ವರ್ಷ 8 ಕೋಟಿ ರೂಪಾಯಿ ಇಟ್ಟಿದ್ದೇವೆ ಮತ್ತು ವಿರಿಜಾ ನಾಲೆಗೆ 18 ಕೋಟಿ ರೂಪಾಯಿ ಹಾಗೂ CDS ನಾಲೆಗೆ 15

ಕೋಟಿ ರೂಪಾಯಿ ಇಟ್ಟಿದ್ದೇವೆ. ಸಾಕಷ್ಟು ಹಣವನ್ನು ಒದಗಿಸಿದ್ದೇವೆ. ಹಣದ ಪ್ರಶ್ನೆ ಇಲ್ಲ. ಈಗಾಗಲೇ ಒಂದಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿದ್ದೇವೆ. ಉಳಿದಿದ್ದಕ್ಕೂ ಅನುಮೋದನೆ ನೀಡಿ ಕೆಲಸವನ್ನು ಮಾಡುತ್ತೇವೆ. ನಿರ್ವಹಣೆ ಕಾಮಗಾರಿಯಲ್ಲಿ ಏನಾದರೂ ವಿಶೇಷವಾಗಿ ಎಲ್ಲಿಯಾದರೂ ತೊಂದರೆ ಇದ್ದರೆ ಅದನ್ನು ನನ್ನ ಗಮನಕ್ಕೆ ತಂದರೆ, ಆ ಕೆಲಸವನ್ನೂ ಕೂಡ ನಾನು ಮಾಡುತ್ತೇನೆ.

ಶ್ರೀ ರಮೇಶ್ ಬಂಡಿಸಿದ್ದೇಗೌಡ ಎ.ಬಿ.: ನಮ್ಮಲ್ಲಿ ಏನು ತೊಂದರೆಯಾಗಿದೆ ಎಂದರೆ,ಮಾನ್ಯ ಸಚಿವರು ಉತ್ತರ ಹೇಳುತ್ತಾ, ಮುಖ್ಯ ನಾಲೆಗೆ ಹಣ ಕೊಡುತ್ತೇವೆಂದು ಹೇಳಿದ್ದಾರೆ. ಅದರಲ್ಲಿ pick up ಗಳ ಅಭಿವೃದ್ಧಿ ಬಗ್ಗೆ ಎಲ್ಲಿಯೂ ಪ್ರಸ್ತಾಪ ಮಾಡಲಿಲ್ಲ. ಬಹಳಷ್ಟು ಕಡೆ pick up ಗಳು ಇವೆ. ಸುಮಾರು 25, 50 ಕ್ಕಿಂತ ಹೆಚ್ಚು pick up ಗಳು ನಮ್ಮ ವಿರಿಜಾ ನಾಲೆಯಲ್ಲಿ, CDS ನಾಲೆಯಲ್ಲಿ ಇವೆ.pick up ಗಳ ಅಭಿವೃದ್ಧಿ ಮಾಡದೇ ಕೊನೆಯ ಭಾಗಕ್ಕೆ ನೀರುಹೋಗುವಂಥ ಪ್ರಶ್ನೆಯೇ ಇಲ್ಲ. ಬೆಳೆಗಳಿಗೆ ನೀರು ಒದಗಿಸಲಿಕ್ಕೆ ಕಾಲುವೆಗಳ ರಿಪೇರಿಗೆ ಎಂದು 46 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದು ಏನೇನಕ್ಕೂ ಸಾಕಾಗುವುದಿಲ್ಲ. ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಒತ್ತಾಯಿಸುವುದೇನೆಂದರೆ, pick up ಗಳ ಅಭಿವೃದ್ಧಿಗೆ ತಕ್ಷಣ ಹಣ ಬಿಡುಗಡೆ ಮಾಡಬೇಕು.

ಶ್ರೀ ಬಸವರಾಜ ಬೊಮ್ಮಾಯಿ: ನಾನು ಈಗಾಗಲೇ ಉತ್ತರವನ್ನು ಹೇಳಿದ್ದೇನೆ. ಅದರಲ್ಲಿ ಎಲ್ಲವೂ ಅಳವಡಿಸಿದೆ. ಅಂಥದ್ದು ಏನಾದರೂ ವಿಶೇಷವಾಗಿ ತೊಂದರೆ ಇದ್ದರೆ ಗಮನ ಹರಿಸುತ್ತೇನೆ.

ಬೆಳಗಾವಿ ಮತಕ್ಷೇತ್ರಕ್ಕೆ ಹೊಸ ಐ.ಟಿ.ಐ ಕಾಲೇಜು

03(138)

ಶ್ರೀ ಅಭಯ್ ಪಾಟೀಲ್(ಬೆಳಗಾಂ ದಕ್ಷಿಣ)

ಪ್ರಶ್ನೆ

ಅ)ರಾಜ್ಯದಲ್ಲಿ ಹೊಸದಾಗಿ ಐ.ಟಿ.ಐ ಸರ್ಕಾರಿ/ಖಾಸಗಿ ಕಾಲೇಜುಗಳನ್ನು ಸ್ಥಾಪಿಸುವ ಕುರಿತು 01.01.2008 ರಿಂದ 30.06.2012 ರವರೆಗೆ ಬಂದಿರುವ ಪ್ರಸ್ತಾವನೆಗಳ ವಿವರ ನೀಡುವುದು; ಅವುಗಳನ್ನು ಆರಂಭಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು; (ಮತಕ್ಷೇತ್ರವಾರು ಸಂಸ್ಥೆಯ ಹೆಸರುಗಳೊಂದಿಗೆ ವಿವರ ನೀಡುವುದು)?